# ಸ್ವಾಮಿ ಧೀರೇಶಾನಂದ (೧೯೦೭-೧೯೯೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಭಾಗ ೩ ಅನುವಾದ: **ಕುಮಾರಿ ಪಿ. ಉಷಾ**

**ಜೀ**ವನವೆಲ್ಲ ಒಂದು ದೀರ್ಘ ಸ್ವಪ್ನವಲ್ಲದೆ ಬೇರೇನೂ ಅಲ್ಲವೆ? ಸ್ವಪ್ನ ಅಥವ ನಿದ್ರೆಯಿಂದ ಎಚ್ಚೆತ್ತರೆ ಉಳಿಯುವು ದಾದರೂ ಏನು? ಏನು ಉಳಿಯುವುದೋ ಅದೇ.

ಅನಾದಿ ನಿದ್ರಯಾ ಸುಪ್ತೋ ಯದಾ ಜೀವೋ ಪ್ರಬುಧ್ಯತೇ ।
ಅನಿದ್ರಮಸ್ವಪ್ನಂ ನಿಷ್ಪನ್ನಂ ಬ್ರಹ್ಮ ನಿಷ್ಪನ್ನಂ ಬ್ರಹ್ಮ ತತ್ತದಾ ॥

ಅಜ್ಞಾನ ನಿದ್ರೆಯಲ್ಲಿ ಸುಪ್ತ ಜೀವವು ಅದೆಷ್ಟು ಸ್ವಪ್ನಗಳನ್ನು ಕಾಣುತ್ತದೆ! ಆದರೆ ಜ್ಞಾನೋದಯವಾದಾಗ – ನಿದ್ರೆಯಿಂದ ಎಚ್ಚೆತ್ತಾಗ ಜೀವವು ತನ್ನ ಸ್ವ-ಸ್ವರೂಪವನ್ನು ಪುನಃ ಪಡೆಯುತ್ತದೆ. ಇನ್ನುಮೇಲೆ ಸ್ವಪ್ನದೃಶ್ಯ ಇರುವುದಿಲ್ಲ; ಅದು ಎಲ್ಲೋ ವಿಲೀನ ವಾಗಿ ಬಿಡುತ್ತದೆ.


ಒಂದು ಸುಂದರ ಶ್ಲೋಕವನ್ನು ನಿನಗೆ ಹೇಳುತ್ತೇನೆ:

ಅಹಂಕಾರೋ ಧಿಯಂ ವೃತೇ ಮಾ ಸುಪ್ತೋಽಯಂ ಪ್ರಬೋಧಯ ।
ಉದೀತೇ ಪರಮಾನಂದೇ ನಾಹಂ ನ ತ್ವಂ ನೇದಂ ಜಗತ್ ॥

ಪರಮಪತಿ ಪರಮಾನಂದ ಸ್ವರೂಪನಾದ ಪರಮಾತ್ಮನು ಅಜ್ಞಾನವೆಂಬ ಗಾಢ ನಿದ್ರೆಯಲ್ಲಿ ಮುಳುಗಿರುವನು. ಕುಲಗೆಟ್ಟ ಸ್ತ್ರೀ ಬುದ್ಧಿಯು, ಉಪಪತಿ ಅಹಂಕಾರದೊಂದಿಗೆ ವಿಲಾಸದಲ್ಲಿ ಮಗ್ನಳಾಗಿ, ''ಆಹಾ! ನಾವು ಎಷ್ಟು ಆನಂದದಿದ್ದೇವೆ, ಇವನು ಮಲಗಿದ್ದಾನೆ. ಅವನನ್ನೆಬ್ಬಿಸಿ ಈ ಆನಂದದಲ್ಲಿ ಪಾಲ್ಗೊಳ್ಳುವಂತೆ ಮಾಡೋಣವೇ'' ಎಂದಾಗ ಅಹಂಕಾರವು ಹೇಳುತ್ತದೆ, ''ಜೋಕೆ! ಅವನನ್ನು ಎಚ್ಚರಗೊಳಿಸಿದರೆ ನೀನು, ನಾನು, ಜಗತ್ತು ಯಾರೂ ಉಳಿಯುವುದಿಲ್ಲ. ನಾವೆಲ್ಲ ನಾಶವಾಗಿ ಹೋಗುತ್ತೇವೆ. ನಮ್ಮ ಪ್ರಭುತ್ವ ಅವನು ಮಲಗಿರುವರೆಗೆ ಮಾತ್ರವೆ.'' ಸುಪ್ತೋಽಯಂ (ಅವನು ನಿದ್ರಿಸಿದ್ದಾನೆ, ಹಾಗೆ ಇರಲಿ) ಮಾ ಪ್ರಬೋಧಯ (ಅವನನ್ನು ಎಬ್ಬಿಸಬೇಡ).

**೨೨.೦೨.೧೯೮೮, ಕಂಖಲ್ ಸೇವಾಶ್ರಮ**

ನೀನು 'ಸತ್ಸಂಗ ರತ್ನಾವಳಿ'ಯನ್ನು 'ಉದ್ಬೋಧನ' ಪತ್ರಿಕೆ ಯಲ್ಲಿ ಪ್ರಕಟಿಸಬೇಕೆಂದಿರುವೆ. ಅವನ್ನೆಲ್ಲ ನಿನಗೆ ಕೊಟ್ಟಿರುವೆ. ನಿನ್ನ ಮನಸ್ಸಿಗೆ ತೋರಿದಂತೆ ಮಾಡು. ಆದರೆ 'ಉದ್ಬೋಧನ' ಅವುಗಳನ್ನು ಇಷ್ಟಪಡುವುದೆಂದು ನನಗನ್ನಿಸುತ್ತಿಲ್ಲ. ನನ್ನ ಹೆಸ ರನ್ನು ಬರೆಯಬೇಕಿಲ್ಲ. ಪೂರ್ಣಾತ್ಮಾನಂದರ ಯಾವ ಪತ್ರವೂ ನನಗೆ ಸಿಕ್ಕಿಲ್ಲ. ಲೇಖನಗಳನ್ನು ಪ್ರಕಟಿಸುವುದು, ನನ್ನ ಹೆಸರನ್ನು ಪ್ರಕಾಶಿಸುವುದು–ಈಗ ನನಗೆ ಇವೆಲ್ಲ ಸ್ವಲ್ಪವೂ ಇಷ್ಟವಿಲ್ಲ. ಈಗ 'ರಾಮ, ರಾಮ' ಎನ್ನುತ್ತ ದಿನಗಳನ್ನು ಚೆನ್ನಾಗಿ ಕಳೆದರೆ ಅಷ್ಟೇ ಸಾಕು – ಅದಕ್ಕಾಗಿ ಆಶೀರ್ವದಿಸು. ಈ ಜಗತ್ಸ್ವಪ್ನವು ಈಗ ರುಚಿಸುತ್ತಿಲ್ಲ. ಆದಷ್ಟು ಬೇಗನೆ ಈ ಸ್ವಪ್ನವು ಮುರಿಯಲಿ–



ಇದೇ ಪ್ರಾರ್ಥನೆ. ಈಗ ಬೇಕಾಗಿರುವುದು ಸ್ವಾಮೀಜಿಯವರು ಹೇಳಿದಂತೆ ''ಇನ್ನು ಕನಸು ಕಾಣಬೇಡ. ಸತ್ಯವನ್ನು ಅರಿ ತುಕೋ. ಬಳಿಕ ಅದರಲ್ಲಿ ಒಂದಾಗು. ದರ್ಶನಗಳೆಲ್ಲ ನಿಂತು ಹೋಗಲಿ.''

ನೀನು ಸ್ವಾಮೀಜಿಯವರ ಬಗ್ಗೆ ಒಂದು ವಿಡಿಯೊ ತಯಾ ರಿಸುವೆಯೆಂದು ಕೇಳಿ ಆನಂದವಾಯಿತು. ಅದನು ವೀಕ್ಷಿಸಿ ಅದೆಷ್ಟು ಜನ ಆನಂದಿಸುವರು! ನೀನು ಧನ್ಯ. ಎಷ್ಟೊಂದು ಜನರಿಗೆ ಆನಂದವನ್ನು ನೀಡುತ್ತಿರುವೆ! ಕೆಲಸಗಳ ಜೊತೆಗೆ ತುಂಬ ಜಪ-ಧ್ಯಾನಗಳನ್ನು ಮಾಡುವೆಯೆಂದು ಆಶಿಸುತ್ತೇನೆ. ಅವು ಗಳನ್ನು ತಪ್ಪಿಸಬಾರದು. ಇಲ್ಲವಾದರೆ ವಿಡಿಯೊ-ಮಿಡಿಯೊ ಗಳಿಂದ ಏನೂ ಲಾಭವಿಲ್ಲ. ಲಂಗರನ್ನು ಎಸೆದು ದೋಣಿಗೆ ಹುಟ್ಟು ಹಾಕಬೇಕು.

ನನಗೀಗ ಹೊಸ ಲೇಖನವನ್ನು ಬರೆಯುವ ಸಾಮರ್ಥ್ಯ ವಾಗಲಿ ಉತ್ಸಾಹವಾಗಲಿ ಇಲ್ಲ. ಎರಡು ಕಣ್ಣುಗಳ ಪೊರೆಯ ಶಸ್ತ್ರಚಿಕಿತ್ಸೆಯ ನಂತರ ನಾನು ದೈಹಿಕವಾಗಿ, ಬೌದ್ಧಿಕವಾಗಿ ವಿಕಲ ನಾಗಿಬಿಟ್ಟಿರುವೆ. ಆದ್ದರಿಂದ 'ಮನಸ್ಸು' ಎಂಬ ವಿಷಯದ ಬಗ್ಗೆ ಲೇಖನ ಬರೆಯುವುದು, ಪರಾಮರ್ಶನ ಗ್ರಂಥಗಳನ್ನು ಸಂಗ್ರ ಹಿಸಿ ಓದುವುದು – ಇವೆಲ್ಲ ನನಗಿನ್ನು ಸಾಧ್ಯವಿಲ್ಲ. ಮಾಡ

ಬೇಕಾದ್ದನ್ನು ಬೇಕಾದಷ್ಟು ಮಾಡಿ ಮುಗಿಸಿದ್ದೇನೆ. ಇನ್ನು ನೀವೆಲ್ಲ ಬರೆಯಿರಿ. ನನಗೀಗ 'ಅಬ್ ತುಮ್ ಪಾರ್ ಕರೋ ಮೇರೆ ನೈಯಾ!' ಎಂಬ ಭಾವ ಬಂದಿದೆ. ನಾನು ಬಹಳ ಆನಂದದಿಂದಿದ್ದೇನೆ. ಭಗವಂತನ ಇಚ್ಛೆಯಂತಾಗಲಿ.''

### ೫.೧೧.೧೯೯೦, ಕಂಖಲ್ ಸೇವಾಶ್ರಮ

ಶ್ರೀರಾಮಕೃಷ್ಣರು ಹಾಗೂ ಅವರ ಶಿಷ್ಯರೆಲ್ಲರೂ ಹಾಸ್ಯಪ್ರಿಯರಾಗಿದ್ದರು. ವೇದಾಂತಿಗಳು ಮಾತ್ರವೇ ನಿಜವಾಗಿಯೂ ಹಾಸ್ಯಪ್ರಿಯರಾಗಬಲ್ಲರು. ಏಕೆಂದರೆ ಅವರಿಗೆ ಮಾತ್ರವೇ ಜಗತ್ತು ಮಾಯೆಯ ಲೀಲೆಯೆಂದು ತಿಳಿದಿರುತ್ತದೆ. ಸಿನಿಮಾದ ವಿಚಿತ್ರ ಚಿತ್ರಗಳನ್ನು ಅಥವ ಇಂದ್ರಜಾಲದ ನಾನಾ ಆಟಗಳನ್ನು ನೋಡಿ ಯಾರು ತಾನೇ ಆನಂದಿಸುವುದಿಲ್ಲ? ಆದ್ದರಿಂದಲೇ ಆಚಾರ್ಯರು ಹೇಳುತ್ತಾರೆ:

**ಜಗಚ್ಚಿತ್ರಂ ಸ್ವಚೈತನ್ಯೇ ಪಟೇ ಚಿತ್ರಮಿವರ್ಪಿತಮ್।**
**ಮಾಯಯಾ ತದುಪೇಕ್ಷ್ಯೈವ ಚೈತನ್ಯಂ ಪರಿಶೇಷ್ಯತಾಮ್ ॥**

ನನ್ನ ಬಿಳಿ ಗಡ್ಡವನ್ನು ನೋಡಿ ನಿನ್ನ ಅಮೆರಿಕನ್ ಭಕ್ತರು ನಾನೊಬ್ಬ ಪ್ರವೀಣ ಸಾಧುವೆಂದು ತಿಳಿದಿರುವರಾಗಿ ಬರೆದಿರುವರು. ಆದರೆ ಬಿಳಿ ಗಡ್ಡ ಹಲವು ಸಂಗತಿಗಳನ್ನು ಮರೆಮಾಡಬಲ್ಲುದು ಎಂದು ಅವರಿಗೆ ತಿಳಿದಿಲ್ಲವೆ? ಏನೇ ಆಗಲಿ, ನಾನು ಮಾತ್ರ ಮಹಾತ್ಮರ ಸಹವಾಸದಲ್ಲಿ ಇದ್ದೇನೆ ಎಂದೇ ಭಾವಿಸುತ್ತೇನೆ: ಏಕೆಂದರೆ, ಮೋಡದ ಮೇಲೆ ಸಿಂಹಾಸನದಲ್ಲಿ ಕುಳಿತ ಯೇಸುಕ್ರಿಸ್ತ, ಪೋಪ್-ಬಿಷಪ್‌ಗಳು, ಮಹಮ್ಮದ್, ಝರತುಷ್ಟ್ರ, ಬ್ರಹ್ಮ-ವಿಶ್ವಕರ್ಮನೇ ಮೊದಲಾದ ಹಲವು ಹಿಂದೂ ದೇವತೆಗಳು, ಹಲವು ಋಷಿಗಳು, ಶ್ರೀರಾಮಕೃಷ್ಣರು - ಎಲ್ಲರಿಗೂ ಗಡ್ಡವಿತ್ತು.

### ೧೫.೦೬.೧೯೯೧, ಕಂಖಲ್ ಸೇವಾಶ್ರಮ

God lived with Them ಪುಸ್ತಕದಲ್ಲಿ ನೀನು ನಿರಂಜನ್ ಮಹಾರಾಜರ ಜೀವನ ಚರಿತ್ರೆಯನ್ನು ಬರೆದಿರುವೆಯೆಂದು ತಿಳಿದು ಸಂತೋಷವಾಯಿತು. ಅವರು ಕಂಖಲ್‌ನ ದಕ್ಷೇಶ್ವರ ಮಂದಿರದ ದಕ್ಷಿಣದಲ್ಲಿ, ಗಂಗಾತೀರದಲ್ಲಿದ್ದ ಒಂದು ಗುಡಿಸಿಲಿನಲ್ಲಿದ್ದು ಅಲ್ಲಿಯೆ ಮರಣಹೊಂದಿದರೆಂದು ಕೇಳಿದ್ದೇನೆ. ಅವರ ಸೇವೆ ಮಾಡಲೆಂದು ಕಲ್ಯಾಣಾನಂದರು ಅವರನ್ನು ಆಶ್ರಮಕ್ಕೆ ಕರೆತರಬೇಕೆಂದಿದ್ದರು. ಆದರೆ ಅವರು ಅದಕ್ಕೊಪ್ಪಲಿಲ್ಲ. ಮಾತ್ರವಲ್ಲ, ''ನೀವು ನನ್ನನ್ನು ಶಾಂತಿಯಿಂದ ಸಾಯಲೂ ಬಿಡುವುದಿಲ್ಲವೆ?'' ಎಂದು ಹೇಳಿದ್ದರಂತೆ.

ನನ್ನ ಡೈರಿಗಳಿಂದ ೩೦ ಉಪನ್ಯಾಸಗಳಿಗೆ (From the Dairy of a Monk) ಬೇಕಾದ ವಿಷಯಗಳು ದೊರೆತಿವೆಯೆಂದು ತಿಳಿದು ಸಂತೋಷಗೊಂಡೆ. ವಿದ್ವಾಂಸರೂ, ಬುದ್ಧಿವಂತರೂ ದುಂಬಿಗಳಂತೆ. ಯಾವುದೇ ವಿಷಯದಿಂದ ಬೇಕಾದರೂ ಅವರು ಕಲಿಯುವರು. ಉದಾಹರಣೆಗೆ, ಅವಧೂತ ಹಾಗೂ ಅವರ ೨೪ ಗುರುಗಳು. ಇವೆಲ್ಲವನ್ನೂ ಪುನಃ ಪುನಃ ಸಂಗ್ರಹಿಸಿ, ಆಯ್ಕೆ ಮಾಡುವ ಸಾಮರ್ಥ್ಯ ನನ್ನ ಶರೀರ-ಮನಗಳಿಗೆ ಈಗಿಲ್ಲ. ಇವು ನಿನಗೆ ಉಪಯುಕ್ತವಾಗಿವೆ ಎಂಬುದೇ ನನಗೆ ಸಂತೋಷ. ನಿನಗೆ ಸರಿದೋರಿದಂತೆ ಮಾಡು. ವೃದ್ಧಾಪ್ಯದಲ್ಲಿ ನನ್ನಿಂದೇನು ಮಾಡಲೂ ಸಾಧ್ಯವಿಲ್ಲ. ನನ್ನನ್ನು ಇವುಗಳ ನಡುವೆ ಎಳೆಯಬೇಡ - ಇದೇ ನನ್ನ ಪ್ರಾರ್ಥನೆ. ನಾನು ಈ ಡೈರಿಗಳನ್ನು ಎಸೆದುಬಿಡೋಣವೆಂದುಕೊಂಡಿದ್ದೆ. ಇನ್ನೂ ಎಷ್ಟೋ ಲೇಖನಗಳನ್ನು ಬರೆಯಲೆಂದು ಪರಿವಿಡಿ ಬರೆದಿಟ್ಟುಕೊಂಡಿದ್ದೆ. ಅವುಗಳೆಲ್ಲ ಹಾಗೇ ಬಿದ್ದಿವೆ. ನನ್ನ ಈ ದೇಹದ ಗಂಗಾಯಾತ್ರೆಯ ಬಳಿಕ ಅವುಗಳನ್ನು ಪಡೆಯಲು ನೀನು ಪ್ರಯತ್ನಿಸಬಹುದು. ಇವುಗಳಿಂದ ನಿನಗೆ ಉಪಯೋಗವಾಗಬಹುದು. ಈಗ ಆತನ ನಾಮಸ್ಮರಣೆ ಮಾಡುತ್ತ ಉಳಿದಿರುವ ದಿನಗಳನ್ನು ಕಳೆಯುವಂತೆ ನೀವು ನನಗಾಗಿ ಪ್ರಾರ್ಥಿಸಿ. ನನಗಿನ್ನೇನೂ ಬೇಡ.

**ಕೊನೆಗಾಲದಲಿ ರಾಮಕೃಷ್ಣ ನಾಮವಲ್ಲದೆ ಅನ್ಯಗತಿ ಎಮಗಿಲ್ಲ**
**ರಾಮಕೃಷ್ಣರ ಭಜಿಸು, ರಾಮಕೃಷ್ಣರ ಸ್ಮರಿಸು**
**ಇಂಥ ಕರುಣಾಳು ಇನ್ನಿಲ್ಲ ಜಗದಲಿ ।**

ಜೀವನಚರಿತ್ರೆಯನ್ನು ಬರೆಯುವ ಬಗ್ಗೆ ಗುರುದಾಸ ಮಹಾರಾಜರೊಂದಿಗೆ (ಸ್ವಾಮಿ ಅತುಲಾನಂದ) ಮಾತನಾಡಿದ್ದೆ. ಅವರು ಹೇಳಿದ್ದನ್ನು ಪ್ರತಿ ಮಾಡಿ ಕಳುಹಿಸಿದೆ. ವಿಷಯ ಚಿಂತನೀಯವಾದುದು. ಒಂದು ದಿನ ಅವರು ಹೇಳಿದ್ದರು, ''ಜೀವನ ಚರಿತ್ರೆಯಲ್ಲವೂ 25% ಮಾತ್ರವೇ ಸತ್ಯ. ಉಳಿದದ್ದೆಲ್ಲ ಉತ್ಪ್ರೇಕ್ಷೆ.''

ನಾವು ಅನೇಕ ವಿಷಯಗಳನ್ನು ಗುಪ್ತವಾಗಿರಿಸುತ್ತೇವೆ. ಠಾಕೂರರ ಜೀವನದಲ್ಲಿ ಮಾತ್ರವೇ ಅವರ ಮಾನವ ಆಯಾಮ ಅವರದೇ ಮಾತುಗಳಲ್ಲಿ ಪ್ರಕಟವಾಗಿರುವುದನ್ನು ನಾವು ಕಾಣುತ್ತೇವೆ. ಆದರೆ ಜನರು ಅವರ ದೈವೀ ಆಯಾಮವನ್ನು ಮಾತ್ರ ನೋಡಬಯಸುತ್ತಾರೆ. ಠಾಕೂರರು ಕಾಮಾತುರರಾಗಿ ಚಡಪಡಿಸುತ್ತ, ನೆಲದ ಮೇಲೆ ಬಿದ್ದು ಹೊರಳಾಡುತ್ತ, ತಮ್ಮ ಮುಖವನ್ನು ನೆಲಕ್ಕೆ ಉಜ್ಜುತ್ತ ಹೇಳುತ್ತಾರೆ, ''ಅಮ್ಮಾ, ಹಾಗೇನಾದರೂ ಆದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುವೆ.'' ಇದೊಂದು ಆಶಾದಾಯಕ ಘಟನೆ. ಇದರಿಂದ ನಾವು ಪಾಠ ಕಲಿತೆವು. ರಾಮದತ್ತನಂತಹ ಭಕ್ತರು ಇದನ್ನು ಪ್ರಕಟಪಡಿಸುತ್ತಿರಲಿಲ್ಲವೇನೊ? ಆದರೆ ಇದನ್ನು ಮುಚ್ಚಿಟ್ಟು ಪ್ರಯೋಜನ ವಾದರೂ ಏನು? ಮಹಾನ್ ಋಷಿಗಳೂ ಕೂಡ ಪತನ ಹೊಂದಿದ್ದಾರೆ. ಇವೆಲ್ಲ ಅಲ್ಪಕಾಲಿಕ ಹಂತಗಳು. ಪುನಃ ಅವರು ತಮ್ಮ ಗಾಢ ತಪಸ್ಸಿನಿಂದ ಎದ್ದು ನಿಂತಿರುವರು. ಇದರಿಂದ ನಾವು ಪಾಠ ಕಲಿಯುತ್ತೇವೆ. ಯಾರೂ ಕೂಡ ತಮ್ಮ ಬಗ್ಗೆ ಅತಿಯಾದ ಆತ್ಮವಿಶ್ವಾಸ ಹೊಂದಿರಬಾರದು. ಭಗವಂತ ಕಾಪಾಡಿದರೆ ಮಾತ್ರವೇ ನಮಗೆ ರಕ್ಷಣೆ, ಇಲ್ಲವಾದರೆ ಸರ್ವನಾಶ ಎಂಬುದನ್ನು ನಾವು ಮರೆಯುವಂತಿಲ್ಲ. ಆತನಲ್ಲಿ ಶರಣಾಗುವುದೊಂದೇ ಉಪಾಯ.

'ಸತ್ಸಂಗ ರತ್ನಾವಳಿ'ಯ ಬಗ್ಗೆ ನಾನು ಈ ಮೊದಲೇ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿರುವೆ. ಕೆಲವರು ನನ್ನನ್ನು ಶಂಕರರ

ಅನುಯಾಯಿ ಎಂದು ತಿಳಿದಿದ್ದಾರೆಂದು ಕೇಳಿರುವೆ. ಅವರಿಗೆ ಒಳಿತಾಗಲಿ. ಯಾರು ಶಂಕರರ ಅನುಯಾಯಿ, ಹಾಗೂ ಯಾರು ಶ್ರೀರಾಮಕೃಷ್ಣರ ಅನುಯಾಯಿ ಎಂಬುದು ಬಹುಶಃ ಭಗವಂತನಿಗೆ ಮಾತ್ರವೆ ಗೊತ್ತು. ನನಗೆ ಮಾತ್ರ ಶಂಕರ ಹಾಗೂ ರಾಮಕೃಷ್ಣರಲ್ಲಿ ಯಾವ ವ್ಯತ್ಯಾಸವೂ ಕಾಣಿಸದು. ಸಾಮಾನ್ಯ ಜನರಿಗಾಗಿ ಠಾಕೂರರು ಭಕ್ತಿಪಥವನ್ನು ಒತ್ತಿ ಹೇಳುತ್ತಿದ್ದರು. ಶಂಕರರೂ ಅನೇಕ ಸ್ತುತಿಗಳನ್ನು ರಚಿಸಿದ್ದಾರೆ. **'ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್। ಸಾಮುದ್ರೋ ಹಿ ತರಂಗಃ ಕ್ವಚನ ಸಮುದ್ರೋ ನ ತರಂಗಃ ॥'** ಶಂಕರರ ಭಕ್ತಿ ಪ್ರಧಾನವಾದ ಅಸಂಖ್ಯಾತ ಸ್ತವ-ಸ್ತುತಿಗಳನ್ನು ಯಾರು ತಾನೆ ಸ್ವೀಕರಿಸದಿರಲು ಸಾಧ್ಯ? ಠಾಕೂರರು ಸ್ವಾಮೀಜಿಯವರಿಗೆ ಶಂಕರರ ಅದ್ವೈತ ವಾದದ ಶಿಕ್ಷಣವನ್ನೇ ನೀಡಿದ್ದರು. ಸ್ವಾಮೀಜಿಯವರು ಜಗತ್ತಿಗೆ ಹರಡಿರುವುದೂ ಇದೇ ಅದ್ವೈತವನ್ನು. ಸ್ವಾಮೀಜಿ ಹೇಳುತ್ತಾರೆ, 'ಸಾಮಾನ್ಯವಾಗಿ ಅವರು (ಶ್ರೀರಾಮಕೃಷ್ಣರು) ಉಪದೇಶ ಮಾಡುತ್ತಿದ್ದುದು ದ್ವೈತ ಅಥವಾ ವಿಶಿಷ್ಟಾದ್ವೈತವನ್ನು. ಅವರು ಎಂದೂ ಅದ್ವೈತವನ್ನು ಉಪದೇಶಿಸುತ್ತಿರಲಿಲ್ಲ. ಆದರೆ ಅವರು ನನಗೆ ಅದ್ವೈತವನ್ನು ಬೋಧಿಸಿದರು.''

ಸ್ವಾಮೀಜಿಯವರ ಸಿಂಹಗರ್ಜನೆ ಇದು : ''ಏಳಿ! ಏದ್ದೇಳಿ! ಕನಸು ಕಾಣಬೇಡಿ. ಧೈರ್ಯ ತಾಳಿ, ಸತ್ಯವನ್ನು ಎದುರಿಸಿ. ಅದರಲ್ಲಿ ಒಂದಾಗಿ. ಎಲ್ಲ ಭ್ರಮೆಗಳೂ ಕೊನಗೊಳ್ಳಲಿ.'' ಹಾಗಾದರೆ ಅವರು, ಸ್ವಾಮೀಜಿ ಕೂಡ ಶಂಕರರ ಅನುಯಾಯಿ ಎನ್ನುವರು. ಏನಾದರೂ ಹೇಳಲಿ, 'ಭಿನ್ನರುಚಯೋರ್ಹಿ ಲೋಕಾಃ'.

ಸೇವಾಪ್ರತಿಷ್ಠಾನವನ್ನು ಮುಚ್ಚಬೇಕಾಯಿತಂತೆ. ಅಲ್ಲಿ ಮಹತ್ತರ ಕಾರ್ಯ ನಡೆಯುತ್ತಿತ್ತು. ನಡೆಸುವುದು ಸಾಧ್ಯವಾಗದೆ ಹೋಯಿತು. ಇಲ್ಲಿಯೂ (ಕಂಖಲ್‌ನಲ್ಲಿ) ಕೆಲಸ ಹೆಚ್ಚಿದೆ, ಇನ್ನೂ ಹೆಚ್ಚುತ್ತಿದೆ. ಕಾಶಿಯ ಸೇವಾಶ್ರಮದಲ್ಲಿ ೨೪ ಗಂಟೆ ಕೂಡ ಸಶಸ್ತ್ರ ಸಂರಕ್ಷಕರನ್ನು ಇರಿಸಿಕೊಳ್ಳಬೇಕಾಗಿದೆಯೆಂದು ಕೇಳಿದೆ. ಇದೇ ನಮ್ಮ 'ಶಿವಜ್ಞಾನೇ ಜೀವಸೇವಾ' ಎಂಬ ಮಂತ್ರದ ಪರಿಣಾಮ. ಸ್ವಾಮೀಜಿಯ ನುಡಿಗಳು ಮಿಥ್ಯೆಯಾಗವು. ನಾವು ಅವರ ಯೋಗ್ಯ ಅನುಯಾಯಿಗಳು ಅಲ್ಲವೆನ್ನಬೇಕು. ಭವಿಷ್ಯದಲ್ಲಿ ಯೋಗ್ಯರು ಬರುವರು. ಅವರು ಠಾಕೂರ್-ಸ್ವಾಮೀಜಿಯವರ ಉಪದೇಶಗಳಿಗೆ ಸರಿಯಾದ ರೂಪು ನೀಡುವರೆಂದು ತೋರುತ್ತದೆ.

ಭಗವಂತನು ಅವತರಿಸಿದಾಗ ಆಯಾ ದೇಶ, ಸಮಾಜಗಳಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಜೀವನದಲ್ಲಿ ನಾನಾ ಪರಿವರ್ತನೆಗಳು ಕಂಡುಬರುತ್ತವೆ. ಇದರಿಂದ ನೂತನ ಸಮಾಜದ ಸೃಷ್ಟಿಯಾಗುತ್ತದೆ. ಅವತಾರಗಳ ಆಗಮನ ಎಂದಿಗೂ ವ್ಯರ್ಥವಾಗದು. ಆದರೆ ಆ ಸುವರ್ಣ ಯುಗದ ಆಗಮನವನ್ನು ನಾವು ನೋಡಿ ಹೋಗಲಾಗುವುದಿಲ್ಲ. ನಮ್ಮ ಕಾಲದಲ್ಲಿ ಅದು ಸಂಭವಿಸುವುದಿಲ್ಲ.

ನಮ್ಮ ಅನೇಕ ಸಾಧುಗಳು ಹೃಷೀಕೇಶ, ಉತ್ತರಕಾಶಿಗಳಲ್ಲಿ ರೊಟ್ಟಿ-ಬೇಳೆಸಾರನ್ನು ತಿಂದುಕೊಂಡು ತಪಸ್ಸು ಮಾಡಲೆಂದು ಓಡೋಡಿ ಬರುತ್ತಿರುವುದು ಕಂಡುಬರುತ್ತಿದೆ.

'ಠಾಕೂರರ ಆಶ್ರಮಗಳು ತಪಸ್ಸು ಮಾಡಲು ಅನುಕೂಲವಾಗಿರದಿದ್ದರೆ ಅಂತಹ ಆಶ್ರಮಗಳ ಸಾರ್ಥಕತೆಯಾದರೂ ಏನು?' ಎಂದು ಮಹಾಪುರುಷ ಮಹಾರಾಜರು ಹೇಳುತ್ತಿದ್ದರು. ನಿಜವಾದ ದೃಷ್ಟಿಕೋನವನ್ನೇ ನಾವು ಕಳೆದುಕೊಂಡಿದ್ದೇವೆ, ಅನ್ನಿಸುತ್ತದೆ. ಈಗ ಆಶ್ರಮಗಳಲ್ಲಿ ರೇಡಿಯೋ, ಟಿ.ವಿ., ಹರಟೆ, ಒಳ್ಳೆಯ ಊಟ, ಒಳ್ಳೆಯ ಉಡುಗೆ-ತೊಡುಗೆ ಇವುಗಳೊಂದಿಗೆ ಸ್ವಲ್ಪ ಕೆಲಸ - ಇವುಗಳೇ ಜೀವನಾದರ್ಶವಾಗಿಬಿಟ್ಟಿವೆ. ಜೀವನ ಸುಲಭವಾಗಿಬಿಟ್ಟಿದೆ. ಭಗವಂತನು ತನ್ನ ಸಂಘವನ್ನು ರಕ್ಷಿಸಿ ನಮಗೆ ಸದ್ಬುದ್ಧಿ ನೀಡಲೆಂಬುದೇ ಪ್ರಾರ್ಥನೆ. ಆತನ ಸಂಘವನ್ನು ಆತನೇ ರಕ್ಷಿಸುವನು. ಏರಿಳಿತಗಳು ತಾತ್ಕಾಲಿಕ - ಬರುತ್ತವೆ, ಹೋಗುತ್ತವೆ. **'ಸಃ ನಃ ಬುದ್ಧ್ಯಾ ಶುಭಯಾ ಸಂಯುನಕ್ತು ।'**

### ೧೬.೧೧.೧೯೭೧, ಕಂಖಲ್ ಸೇವಾಶ್ರಮ

ಬಾಲ್ಯದಲ್ಲಿ 'ಅಧ್ಯಾತ್ಮರಾಮಾಯಣ'ವನ್ನು ಓದಿ ಮುಗ್ಧನಾಗಿದ್ದೆ. ಈ ಅಪೂರ್ವ ಪುಸ್ತಕದ ಬಂಗಾಳಿ ಅನುವಾದವನ್ನು ಮಾಡಿದರೆ ಚೆನ್ನಾಗಿತ್ತು, ಎಂಬ ಆಸೆ ಆಗಿನಿಂದಲೇ ನನಗಿತ್ತು. ಆಗ ನಾನು ಬಂಗಾಳಿಯಲ್ಲಿ ಈ ಪುಸ್ತಕವನ್ನು ನೋಡಿರಲಿಲ್ಲ. ಜೀವನ ಸಂಧ್ಯೆಯಲ್ಲಿ ಈ ಪುಸ್ತಕವನ್ನು ಬಂಗಾಳಿಗೆ ಅನುವಾದಿಸಲು ಪ್ರಾರಂಭಿಸಿದ್ದೇನೆ. ಮುಕ್ಕಾಲು ಭಾಗ ಮುಗಿದಿದೆ. ಉಳಿದ ಕಾಲುಭಾಗ ಆತನ ಇಚ್ಛೆಯಿಂದ ಬಹುಶಃ ಮುಗಿಯುತ್ತದೆ. ಅನುವಾದದಲ್ಲಿ ಶ್ಲೋಕದ ಅನುವಾದ-ಭಾಷಾಶೈಲಿ-ಶುದ್ಧತೆ-ಮಾಧುರ್ಯಗಳನ್ನು ಕಾಪಾಡಿಕೊಳ್ಳುವುದು ಕಠಿಣ ಕೆಲಸ. ಭಾವಾನುವಾದ ಸುಲಭ. ಅದರಲ್ಲಿ ನಮಗಿಷ್ಟ ಬಂದಂತೆ ಪದ-ಸಂಯೋಜನೆಯನ್ನೂ ಮಾಡಬಹುದು. ಇರಲಿ, ಕೊನೆಗಾಲದಲ್ಲಿ ರಾಮನ ಚರಿತ್ರೆಯನ್ನು ಮನನ ಮಾಡುತ್ತಿರುವೆ. ಇದೇ ನನಗಾದ ಲಾಭ. ಓದುತ್ತಿದ್ದಂತೆ ಕೆಲವೆಡೆಯಲ್ಲಿ ಭಾವಪರವಶನಾಗುತ್ತೇನೆ. ಠಾಕೂರರು ಈ ಪುಸ್ತಕವನ್ನು ಮನಸಾರೆ ಪ್ರಶಂಸಿಸಿದ್ದಾರೆ. ಬೇರೆಲ್ಲೂ ಇಂತಹ ಜ್ಞಾನ-ಭಕ್ತಿಗಳ ಸಮನ್ವಯ ಕಂಡುಬರುವುದಿಲ್ಲ.

ಒಬ್ಬರು ಹೇಳುತ್ತಿದ್ದರು, 'ಕೇಶವ ಚಂದ್ರ ಸೇನನೇ ಜ್ಞಾನ-ಭಕ್ತಿಗಳ ಸಮನ್ವಯವನ್ನು ಮಾಡಿದ್ದಾನೆ ಎಂದು ಬ್ರಹ್ಮ ಸಮಾಜದವರ ಅಭಿಪ್ರಾಯ' ಎಂದು. ಅದನ್ನು ಕೇಳಿದ ಠಾಕೂರರು ಹೇಳಿದರು, ''ಇದೇನು ಹೇಳುತ್ತಿರುವೆ? ಹಾಗಾದರೆ ಅಧ್ಯಾತ್ಮ ಏನು? ಅಧ್ಯಾತ್ಮರಾಮಾಯಣದಲ್ಲಿ ಇದನ್ನು ವಿವಿಧ ರೀತಿಯಾಗಿ ಘೋಷಿಸಲಾಗಿದೆ.'' ಠಾಕೂರರೇ ಹೇಳುತ್ತಿದ್ದಂತೆ ಈ ಪುಸ್ತಕದ ಮೇಲೆ ಅವರಿಗೆ ವಿಶೇಷ ಆಕರ್ಷಣೆಯಿತ್ತು. ನಮ್ಮ ಠಾಕೂರರ ಕುಲದೇವತೆಯ ರಘುವೀರನೇ ಆಗಿದ್ದು, ಆ ಮೂರ್ತಿಯೆಂದರೆ ಅವರಿಗೆ ವಿಶೇಷ ಆಕರ್ಷಣೆ. *(ಮುಂದಿನ ಸಂಚಿಕೆಗೆ)*